# ಶೈವ ಮತ್ತು ವೀರಶೈವ ಧರ್ಮಗಳಲ್ಲಿ ಮೋಕ್ಷದ ಕಲ್ಪನೆ

ಡಾ. ಪ್ರಭುಶಂಕರ

ಶೈವಧರ್ಮದಲ್ಲಿ ಅಡಕವಾಗಿರುವ ತಾತ್ತ್ವಿಕ ಪರಿಕಲ್ಪನೆಗಳ ಸಮಗ್ರವಾದ ಚಿತ್ರಣವನ್ನು ನೀಡಿರುವ ಡಾ.ಪ್ರಭುಶಂಕರ ಅವರು ಹೆಸರಾಂತ ಸಾಹಿತಿಗಳು ಮತ್ತು ರಾಮಕೃಷ್ಣ ಆಶ್ರಮದ ನಿಕಟ ಸ್ನೇಹಿತರು.

ಜಗತ್ತಿನ ಧರ್ಮಗಳಲ್ಲಿ ಶೈವಧರ್ಮವು ಅತ್ಯಂತ ಪ್ರಾಚೀನವಾದದ್ದು ಎಂಬುದು ಅನೇಕ ವಿದ್ವಾಂಸರ ಅಭಿಪ್ರಾಯ. ಮೊಹಂಜೊದಾರೊ ಮತ್ತು ಹರಪ್ಪಗಳಲ್ಲಿ ನಡೆದ ಉತ್ಖನನಗಳು ಶೈವಧರ್ಮವು ತಾಮ್ರ ಅಥವಾ ಕಂಚಿನಯುಗದ, ಎಂದರೆ ಜನರು ಕಲ್ಲಿನ ಹಾಗೂ ಕಂಚಿನ ಆಯುಧಗಳನ್ನು ಬಳಸುತ್ತಿದ್ದ (ಕ್ಯಾಲ್ಕಲಿತಿಕ್) ಯುಗದಷ್ಟು ಹಳೆಯದು, ಅಥವಾ ಅದಕ್ಕೂ ಹಿಂದಿನದು ಎಂಬ ಮುಖ್ಯವಾದ ಅಂಶವನ್ನು ಬೆಳಕಿಗೆ ತಂದಿವೆ. ಆದ್ದರಿಂದ ಅದು ಅತ್ಯಂತ ಪ್ರಾಚೀನವಾದ ಧರ್ಮ ಎಂದು ಪ್ರಸಿದ್ಧ ವಿದ್ವಾಂಸರಾದ ಸರ್ ಜಾನ್ ಮಾರ್ಷಲ್ ಅಭಿಪ್ರಾಯಪಟ್ಟಿದ್ದಾರೆ. [*Mohenjodaro and the Indus Civilization* ನೋಡಿ.]

ಶೈವಧರ್ಮಕ್ಕೆ ಮೂರು ಮಜಲುಗಳಿವೆ. ತಮಿಳುನಾಡಿನಲ್ಲಿ ಅಸ್ತಿತ್ವಕ್ಕೆ ಬಂದು ಒಂದು ನಿರ್ದಿಷ್ಟ ಸ್ವರೂಪವನ್ನು ಪಡೆದ ಶೈವಧರ್ಮ. ಅದನ್ನು ಶೈವಸಿದ್ಧಾಂತ ಎಂದು ಕರೆದಿದ್ದಾರೆ. ಎರಡನೆಯದು ಅದ್ವೈತ ಸಿದ್ಧಾಂತಕ್ಕೆ ತೀರ ಹತ್ತಿರವಿರುವ ಕಾಶ್ಮೀರ ಶೈವ ಧರ್ಮ. ಮೂರನೆಯದು, ವೀರಶೈವಧರ್ಮ. ಇದು ಕರ್ನಾಟಕ, ಕೇರಳ ಮತ್ತು ಆಂಧ್ರಪ್ರದೇಶಗಳಲ್ಲಿ ಅನುಷ್ಠಾನದಲ್ಲಿರುವ ಧರ್ಮ.

## ಶೈವಧರ್ಮದ ಮೂಲ ಕಲ್ಪನೆಗಳು

ಶೈವಸಿದ್ಧಾಂತದ ಪ್ರಕಾರ ಮೋಕ್ಷ ಎಂದರೆ ಏನು? ಒಂದೂವರೆ ಸಾವಿರ ವರ್ಷಗಳಷ್ಟು ದೀರ್ಘವಾದ ಇತಿಹಾಸದ ಅವಧಿಯಲ್ಲಿ ರಚಿತವಾಗಿರುವ ಅನೇಕಾನೇಕ ಶೈವಗ್ರಂಥಗಳನ್ನು ಅಧ್ಯಯನ ಮಾಡಿ ವಿದ್ವಾಂಸರು ಶೈವಧರ್ಮದ ಮೂಲಕಲ್ಪನೆಗಳೇನು ಎಂಬುದನ್ನು ನಿರೂಪಿಸಿದ್ದಾರೆ. ಅವುಗಳನ್ನು ಅತ್ಯಂತ ಸುಲಭವಾದ ಮಾತುಗಳಲ್ಲಿ ವಿವರಿಸುವ ಪ್ರಯತ್ನ ಇಲ್ಲಿ ನಡೆದಿದೆ. ಅಂತಿಮವಾಗಿ ಮೂರು ವರ್ಗಗಳಿವೆ. ಅವು **ಪತಿ, ಪಶು** ಮತ್ತು **ಪಾಶ**. ಇಲ್ಲಿ ಪತಿ ಶಿವ. ಅವನು ಅನಾದಿ, ಸರ್ವದೋಷಮುಕ್ತ, ಸರ್ವಜ್ಞ ಮತ್ತು ಸರ್ವಕರ್ತ. ಜೀವ ಅಥವಾ **ಪಶುವನ್ನು** ಬಂಧಿಸುವ ಪಾಶವನ್ನು ಕಿತ್ತೊಗೆಯಬಲ್ಲವನು ಅವನು. ಅವನು ಸ್ವಯಂಭು, ಎಂದರೆ ತನಗೆ ತಾನೇ ಅಸ್ತಿತ್ವವನ್ನು ಹೊಂದಿರುವವನು. ಎರಡನೆಯ ವರ್ಗ **ಪಶು** ಅಥವಾ ಜೀವ. ಅವುಗಳು ಪತಿಯ ಆಸ್ತಿ. ಪ್ರತಿಯೊಂದು ಜೀವವೂ ಸ್ವಭಾವತಃ ಅನಂತ, ಸರ್ವವ್ಯಾಪಿ ಮತ್ತು ಸರ್ವಜ್ಞ ಇತ್ಯಾದಿ. ಆದರೆ ತಾನು ಸಾಂತ, ಮಿತಿಯುಳ್ಳದ್ದು ಮತ್ತು ಅಜ್ಞಾನಿ ಅಥವಾ ಅಲ್ಪಜ್ಞಾನಿ ಎಂಬುದಾಗಿ ಅದು ಭಾವಿಸುತ್ತದೆ. ಹೀಗೆ ಅದು ಭಾವಿಸುವುದಕ್ಕೆ ಕಾರಣ ಮಲಗಳು ಅಥವಾ ಅಶುದ್ಧಿಗಳು. ಮಲಗಳು ಮೂರು: **ಆಣವ, ಕಾರ್ಮಿಕ ಮತ್ತು ಮಾಯಾ.** ಆಣವ ಮಲವು ಜೀವಿಗೆ ಜನ್ಮತಃ ಬಂದದ್ದು. ಈ ಮಲದ ಪ್ರಭಾವದಿಂದ ಜೀವವು ಅನಂತವಾಗಿದ್ದರೂ ತಾನು ಸಾಂತ ಎಂದು ಭಾವಿಸುತ್ತದೆ.

ಜೀವಗಳು ಅಸಂಖ್ಯಾತ. ಅವು ಒಳ್ಳೆಯ ರೀತಿಯಲ್ಲೋ ಕೆಟ್ಟ ರೀತಿಯಲ್ಲೋ ವರ್ತಿಸುತ್ತವೆ. ಅವುಗಳು ಮಾಡುವ ಕ್ರಿಯೆಗಳಿಂದ ಅವು ಎರಡನೆಯ ಮಲವನ್ನು—**ಕಾರ್ಮಿಕ** ಮಲವನ್ನು ಪಡೆಯುತ್ತವೆ. ತಾವು ಮಾಡಿದ ಕೆಲಸಗಳ ಅಥವಾ ಕರ್ಮಗಳ ಫಲವನ್ನು ಅನುಭವಿಸುವುದಕ್ಕೂ, ತನ್ಮೂಲಕ ಜ್ಞಾನವನ್ನು ಪಡೆಯುವುದಕ್ಕೂ ಜಗತ್ತುಗಳು, ಭೋಗವಸ್ತುಗಳು ಮತ್ತು ಜ್ಞಾನಸಾಧನಗಳು ಇರುವುದು ಅಗತ್ಯ. ಇವುಗಳನ್ನು ಮಾಯಾ ಮಲವು ಒದಗಿಸುತ್ತದೆ.

ಶೈವಧರ್ಮದ ಪ್ರಕಾರ ಈ ಜಗತ್ತು ಮಾಯೆ ಅಥವಾ **ಅಸತ್**. ಆದರೆ ಇಲ್ಲಿ **ಅಸತ್** ಎಂದರೆ ಅಸ್ತಿತ್ವದಲ್ಲಿ ಇಲ್ಲದೇ ಇರುವುದು ಅಥವಾ ಅಸತ್ಯವಾದದ್ದು ಎಂದಲ್ಲ. ಏಕೆಂದರೆ, ಶೈವ ಧರ್ಮದ ಪ್ರಕಾರ **ಸತ್** ಎಂಬುದರ ಅರ್ಥ ಶಿವ ಎಂದು. ಹೀಗಾಗಿ ಯಾವುದೆಲ್ಲವೂ ಶಿವನಿಂದ ಬೇರೆಯೋ ಅದು **ಅಸತ್**. ಮಾಯೆಯನ್ನು **ಅಚಿತ್** ಎಂದು ಹೇಳುವಂತೆಯೇ ಇಲ್ಲಿ **ಅಸತ್** ಎನ್ನಲಾಗುತ್ತದೆ. ಮುಕ್ತರಾಗುವುದಕ್ಕೆ ಇರುವ ದಾರಿ ಎಂದರೆ ಶಿವನ ಸ್ವರೂಪವನ್ನು, ಹಾಗೆಯೇ ಜಗತ್ತಿನ ಸ್ವರೂಪವನ್ನು ತಿಳಿದುಕೊಳ್ಳುವುದು.

## ಮೋಕ್ಷಮಾರ್ಗ

ಈ ಧರ್ಮವು ಮೋಕ್ಷಕ್ಕೆ ನಾಲ್ಕುದಾರಿಗಳನ್ನು ವಿಧಿಸಿದೆ. ಆ ದಾರಿಗಳನ್ನು ಪಾರಿಭಾಷಿಕವಾಗಿ **ಚರ್ಯಾ, ಕ್ರಿಯಾ, ಯೋಗ** ಮತ್ತು **ಜ್ಞಾನ** ಎಂದು ಕರೆಯಲಾಗಿದೆ. ಅವುಗಳನ್ನು **ದಾಸ, ಸತ್ಪುತ್ರ, ಸಖಾ** ಮತ್ತು **ಸತ್** ಎಂದೂ ನಿರ್ದೇಶಿಸಲಾಗಿದೆ. ಸಾಧಕನು **ಚರ್ಯಾ** ಮಾರ್ಗವನ್ನು ಅನುಸರಿಸಿ ಸೇವಕನಂತೆ ಶಿವನಿಗೆ ಸೇವೆ

ಸಲ್ಲಿಸುತ್ತಾನೆ. ದೇವಾಲಯದ ಆವರಣವನ್ನು ಶುದ್ಧೀಕರಿಸುವುದು, ಶಿವನಿಗೆ ನಿತ್ಯಪೂಜೆಯನ್ನು ಸಲ್ಲಿಸುವುದು, ಭಗವದ್ಭಕ್ತರಿಗೆ ಅಗತ್ಯವಾದ ಕೆಲಸ ಕಾರ್ಯಗಳನ್ನು ಮಾಡಿಕೊಡುವುದು, ಭಜನೆ ಮುಂತಾದುವುಗಳಲ್ಲಿ ಭಾಗವಹಿಸುವುದು ಇತ್ಯಾದಿಗಳು ಕೆಲವು ಪ್ರಾಥಮಿಕ ಚರ್ಯೆಗಳು. ಕ್ರಿಯೆ ಎಂಬ ಮುಂದಿನ ಘಟ್ಟದಲ್ಲಿ ಜೀವವು ಶಿವನಿಗೆ ಹೆಚ್ಚು ಹತ್ತಿರವಾಗುತ್ತದೆ. ಒಳ್ಳೆಯ ಮಗನು ತಂದೆಗೆ ಹೃತ್ಪೂರ್ವಕವಾಗಿ ಸೇವೆ ಸಲ್ಲಿಸುವಂತೆ ಸಾಧಕನು ಶಿವನಿಗೆ ಸೇವೆ ಸಲ್ಲಿಸುತ್ತಾನೆ. ಮುಂದಿನ ಘಟ್ಟವೇ **ಯೋಗ**. ಈ ಹಂತದಲ್ಲಿ ಜೀವವು ಇಂದ್ರಿಯ ಸುಖಗಳನ್ನು ಅಲ್ಲಗಳೆಯುತ್ತದೆ. ಇದು ಸಾಧ್ಯವಾಗುವುದು ಭಗವಂತನನ್ನು ಧ್ಯಾನಿಸುವುದರಿಂದ. ಸಾಧಕನು ಈಗ ಶಿವನನ್ನು ತನ್ನ ಮಿತ್ರನೆಂದು ಭಾವಿಸುತ್ತಾನೆ. ಇದುವರೆಗೆ ಹೇಳಿದ ಮೂರು ಸ್ಥಿತಿಗಳು ಜೀವವು ಶಿವ ಸ್ವಭಾವವನ್ನು ಪಡೆಯಲು ನೆರವಾಗುವಂಥವು. ಈ ಅಂತಿಮ ಸಿದ್ಧಿಯನ್ನು ಸಾಧಿಸಲು ಅಗತ್ಯವಾದ ನಾಲ್ಕನೆಯ ಸ್ಥಿತಿ ಜ್ಞಾನ. ಅದನ್ನು **ಸನ್ಮಾರ್ಗ** ಎಂದೂ ಕರೆಯಲಾಗಿದೆ. ಇದೇ ಆಧ್ಯಾತ್ಮಿಕ ಸಾಕ್ಷಾತ್ಕಾರ. ಇಲ್ಲಿ ಜೀವಾತ್ಮವು ಪರಿಪೂರ್ಣತೆಯನ್ನು ಪಡೆದು ಎಲ್ಲ ಬಂಧನಗಳಿಂದಲೂ ಬಿಡುಗಡೆ ಹೊಂದುತ್ತದೆ.

## ಶೈವಧರ್ಮದಲ್ಲಿ ಅದ್ವೈತ

ಶೈವಧರ್ಮದ ವಿವಿಧ ಶಾಖೆಗಳು ಸ್ವಭಾವತಃ ಅದ್ವೈತ ಸ್ವರೂಪದವು ಎಂದು ಹೇಳಲಾಗಿದೆಯಾದರೂ ಅವು ಶಂಕರರ ಅದ್ವೈತದಿಂದ ಭಿನ್ನ ಸ್ವರೂಪದವು. ಇಲ್ಲಿ ಜೀವವು ಶಿವನಾಗುವುದೂ ಇಲ್ಲ, ತಾನೇ ಶಿವ ಎಂದು ಭಾವಿಸುವುದೂ ಇಲ್ಲ. ಶಿವೋऽಹಂ ಭಾವ ಇಲ್ಲಿಲ್ಲ. ಸಾಕ್ಷಾತ್ಕಾರವನ್ನು ಪಡೆದ ಸ್ಥಿತಿಯಲ್ಲೂ ಜೀವವು ಶಿವನಿಂದ ಬೇರೆಯೇ ಆಗಿರುತ್ತದೆ. ಮೋಕ್ಷ ಎಂದರೆ ಐಕ್ಯನಾಗುವುದು ಎಂದೂ ಅಲ್ಲ. ಜೀವವು ಶಿವನೊಡನೆ ಐಕ್ಯವಾದರೆ ಅಥವಾ ತಾನೇ ಶಿವ ಎಂದು ಭಾವಿಸುವುದಾದರೆ ಮೋಕ್ಷ ಅಥವಾ ಸ್ವಾತಂತ್ರ್ಯ ಭಾವವನ್ನು ಅನುಭವಿಸುವವರಾದರೂ ಯಾರು? ಭಗವಂತನಿಗೆ ಮೋಕ್ಷಾನುಭವವಿಲ್ಲ, ಏಕೆಂದರೆ ಅವನು ನಿತ್ಯ ಮುಕ್ತ. "ಬದ್ಧಸ್ಥಿತಿಯಲ್ಲಿ ಜೀವವು ಪಾಶದ ಮೂಲಕ ಅನುಭವವನ್ನು ಪಡೆಯುತ್ತದೆ; ಈಗಲಾದರೋ ಅದು ಪತಿಯ ಎಂದರೆ ಭಗವಂತನ ಮೂಲಕ ಅನುಭವವನ್ನು ಪಡೆಯುತ್ತದೆ. ಆದರದು ಈಗ ಪಾಶ-ಜ್ಞಾನವಲ್ಲ, ಪತಿ-ಜ್ಞಾನ; ಪತಿ-ಜ್ಞಾನ ಎಂದರೆ ಭಗವಂತನು ಪಡೆಯುವ ಜ್ಞಾನವಲ್ಲ, ಜೀವವು ಭಗವಂತನ ಮೂಲಕ ಪಡೆಯುವ ಜ್ಞಾನ." (S.S.Suryanarayana Sastry, *Philosophy of Shaivism, The cultural Heritage of India, Vol 3* p.397).

ಮುಕ್ತಸ್ಥಿತಿಯಲ್ಲಿ ಜೀವಾತ್ಮವು ಮೇಲೆ ಹೇಳಿದ ಮಲತ್ರಯಗಳಿಂದ ಮುಕ್ತವಾಗಿರುತ್ತದೆ. ಶಿವನ ಕೇವಲಾನಂದದ ಅನುಭವವನ್ನು ಅದು ಪಡೆಯುತ್ತದೆ—ಶಿವನೊಂದಿಗೆ ಒಂದಾಗದೆಯೇ. ಶೈವಸಿದ್ಧಾಂತದ ಪ್ರಕಾರ ಇದೇ ನಿಜವಾದ ಅದ್ವೈತ. ದ್ವೈತದ ಹಿಂದಿರುವ "ಅ" ಎಂಬುದು ಎರಡು ತತ್ತ್ವಗಳನ್ನು ನಿರಾಕರಿಸುವುದಿಲ್ಲ, ಅದು ನಿರಾಕರಿಸುವುದು ದ್ವೈತದ ಭಾವನೆಯನ್ನು ಮಾತ್ರ.

## ಭಗವದನುಗ್ರಹ

ಈ ಪಂಥದ ಮುಖ್ಯವಾದ ಅಂಶವೆಂದರೆ ಭಗವಂತನ ಕೃಪೆಗೆ ಅದು ನೀಡಿರುವ ಸ್ಥಾನ. ಅರ್ಹನಾದ ಜೀವನ ಕಡೆಗೆ ಹರಿದು ಬರುವ ಭಗವಂತನ ಕೃಪೆ—**ಶಿವಾನುಗ್ರಹ** ಎಂಬುದಕ್ಕೆ ತುಂಬ ಧ್ವನಿಪೂರ್ಣವಾದ ಪದವೊಂದನ್ನು ಈ ಸಿದ್ಧಾಂತ ಸೃಷ್ಟಿಸಿದೆ. ಅದು **ಶಕ್ತಿಪಾತ (ಅಥವಾ ಶಕ್ತಿನಿಪಾತ)** ಎಂಬುದು. ಭಗವಂತನು ಜೀವವನ್ನು ಬಂಧನಗಳಿಂದ ಬಿಡುಗಡೆಗೊಳಿಸುವ ಕೃಪೆ ಅದು. **ಶಕ್ತಿಪಾತ** ಮೂರು ವಿಧವಾದದ್ದು : ತೀವ್ರ, ಮಧ್ಯಮ ಮತ್ತು ಮಂದ್ರ. ಜೀವವು ಕರ್ಮಪರಿಪಾಕದಿಂದ ಮುಕ್ತಿಗೆ ಪಕ್ವವಾಗಿದ್ದರೆ ಭಗವತ್ಕೃಪೆಯು ಅದನ್ನು ತಕ್ಷಣವೇ ಬಂಧಮುಕ್ತವನ್ನಾಗಿ ಮಾಡುತ್ತದೆ. ಇದನ್ನು **ತೀವ್ರಶಕ್ತಿಪಾತ** ಎನ್ನುತ್ತಾರೆ. ಭಗವತ್ಕೃಪೆಯನ್ನು ಹೀಗೆ ಪಡೆಯಲು ಅರ್ಹರಾದ ಉನ್ನತ ಜೀವಿಗಳು ಯಾವುದೇ ರೀತಿಯ ಆಧ್ಯಾತ್ಮಿಕ ಸಾಧನೆಗಳನ್ನೂ ಮಾಡಬೇಕಾದ ಆವಶ್ಯಕತೆ ಇಲ್ಲ. ಇನ್ನೂ ಕಡಮೆ ಅರ್ಹತೆ ಇರುವವರಿಗೆ ಶಿವನಿಂದ ಮಧ್ಯಮ **ಶಕ್ತಿಪಾತ** ದೊರೆಯುತ್ತದೆ. ಅವರು ದೀಕ್ಷೆ ಪಡೆದು ಸಾಧನೆ ಮಾಡಬೇಕಾಗುತ್ತದೆ. ಮೂರನೆಯ ವರ್ಗ **ಮಂದಶಕ್ತಿಪಾತ** ಪಡೆಯುವ ಜೀವಿಗಳದ್ದು. ಆಧ್ಯಾತ್ಮಿಕ ಜೀವನವನ್ನು ಕೈಗೊಳ್ಳುವಂತೆ ಅವರನ್ನು ಉತ್ತೇಜಿಸುವ ಆವಶ್ಯಕತೆ ಇರುತ್ತದೆ. ಎಂದರೆ ತಾವಾಗಿಯೇ ಅವರು ಆಧ್ಯಾತ್ಮಿಕತೆಯ ಕಡೆಗೆ ತಿರುಗುವುದಿಲ್ಲ.

## ಕಾಶ್ಮೀರ ಶೈವಧರ್ಮ

ಕಾಶ್ಮೀರ ಶೈವ ಸಿದ್ಧಾಂತವನ್ನು ಸುಲಭವಾಗಿ ಪರಿಚಯಿಸುವ ಕೃತಿ ಉತ್ಪಲಾಚಾರ್ಯರ **ಈಶ್ವರ ಪ್ರತ್ಯಭಿಜ್ಞಾ** ಎಂಬುದು. "ಪ್ರತ್ಯಭಿಜ್ಞಾ ಎಂಬುದರ ಅರ್ಥ ಮತ್ತೆ ಗುರುತಿಸುವುದು ಎಂದು. ಜೀವವು ವಾಸ್ತವವಾಗಿ ಶಿವನೇ. ಆದರೆ ಅದು ತನ್ನ ನಿಜವಾದ ಸ್ವರೂಪವನ್ನು ಮರೆತು ತಾನೇ ತನ್ನ ಮನೋ-ದೈಹಿಕ ಕ್ರಿಯೆಗಳು ಎಂದು ಭಾವಿಸಿರುತ್ತದೆ. ತನ್ನ ನಿಜವಾದ ಸ್ವರೂಪವನ್ನು ಅರಿಯುವಂತೆ, ತಾನು ಶಿವನಲ್ಲದೆ ಬೇರೇನೂ ಅಲ್ಲ ಎಂಬುದನ್ನು ಮನದಟ್ಟು ಮಾಡುವುದಕ್ಕೆ, ತಾನೂ ಶಿವನೂ ಒಂದೇ ಎಂಬುದನ್ನು ಸಂಜ್ಞಿಸುವುದಕ್ಕೆ ಅವನಿಗೆ ಉಪದೇಶದ ಅಗತ್ಯವುಂಟು" (Jaidev Singh, *Pratyabhijnahridayam*, Motilal Banarsidas, New Delhi, 1977, p.40).

ಈ ಸಿದ್ಧಾಂತದ ಪ್ರಕಾರ ತನ್ನ ಅಂತಿಮ ಸ್ಥಿತಿಯಲ್ಲಿ ಸತ್ಯವು **ಚಿತ್ ಅಥವಾ ಪರಮ-ಸರ್ವವಿತ್**. ಪರಮಾತ್ಮನನ್ನು ಪರಮಶಿವ ಎಂದು ಕರೆಯಲಾಗಿದೆ. ಅವನಿಗೆ ಅನಂತವಾದ ಶಕ್ತಿ ಉಂಟು. ಅವನು ಮಾಯೆಗೆ ತಾನಾಗಿ ಒಳಗಾಗಿ ಐದು **ಕಂಚುಕಗಳನ್ನು** ಅಥವಾ ಆವರಣಗಳನ್ನು ಹಾಕಿಕೊಂಡಿದ್ದಾನೆ. ಅವು ಸರ್ವಜ್ಞತ್ವ

ಮತ್ತು ಸರ್ವಶಕ್ತಿತ್ವಗಳಿಗೆ ಮಿತಿಯನ್ನು ಕಲ್ಪಿಸುತ್ತವೆ. ಅವುಗಳಿಂದ ಅವನು ಪುರುಷ ಅಥವಾ ವ್ಯಕ್ತಿಯಾಗುತ್ತಾನೆ. ಪುರುಷ ಎಂದರೆ ಮಾನವರೂಪಿ ಮಾತ್ರವಲ್ಲ. ಮಿತಿಗೆ ಒಳಗಾಗಿರುವ ಪ್ರತಿಯೊಂದು ಜೀವಿಗೂ ಅದು ಅನ್ವಯಿಸುತ್ತದೆ.

ಪ್ರತ್ಯಭಿಜ್ಞಾ ಶೈವಸಿದ್ಧಾಂತದಲ್ಲಿ ಮೋಕ್ಷ ಎಂದರೆ ಜೀವಿಯು ತನ್ನ ನಿಜವಾದ ಸ್ವರೂಪವನ್ನು ಮತ್ತೆ ಅರಿಯುವುದು. ಅದು ದೊರಕುವುದು **ಶಕ್ತಿಪಾತ** ಅಥವಾ **ಅನುಗ್ರಹ**ದಿಂದ. ಆದರೆ ಅನುಗ್ರಹವು ತನಗೆ ತಾನೇ ದೊರಕುವುದಿಲ್ಲ. ಗುರುವಿನ ನೆರವಿನಿಂದ ನಡೆಸುವ ನೈತಿಕ ಮತ್ತು ಆಧ್ಯಾತ್ಮಿಕ ಸಾಧನೆಗಳಿಂದ ಅದು ಲಭ್ಯವಾಗುತ್ತದೆ. ಕಾಶ್ಮೀರ ಶೈವಧರ್ಮದ ವಿಷಯದಲ್ಲಿ ಅಧಿಕಾರಯುತವಾಗಿ ಹೇಳಬಲ್ಲವರು ಎಂದು ಪರಿಗಣಿತರಾಗಿರುವ ಠಾಕೂರ್ ಜಯದೇವ್ ಸಿಂಗ್‌ರವರ ಈ ಮಾತುಗಳು ಉಲ್ಲೇಖನೀಯವಾಗಿವೆ:

"ಶಿವನ ಅಹಂ-ಪ್ರಜ್ಞೆಯಿಂದ ಒಳಸರಿಯುವ ಕ್ರಿಯೆ ಅಥವಾ ಸಂಕೋಚನ ಕ್ರಿಯೆ ಪ್ರಾರಂಭವಾಗುತ್ತದೆ. ವಿಕಾಸವು ಅದೇ ಶುದ್ಧ ಚಿತ್‌ಗೆ ಹಿಂತಿರುಗುವುದು. ಆದರೆ ಯಾತ್ರಿಕನಾದರೋ ತನ್ನ ಮನೆಗೆ ಹಿಂದಿರುಗುತ್ತಾನೆ. ಆದರೆ ಆ ಪ್ರಯಾಣದ ಹಾದಿಯಲ್ಲಿ ಶಿವನ ವೈಭವದ ಅನುಭವದಿಂದ ಶ್ರೀಮಂತನಾಗುತ್ತಾನೆ. ತೆರೆಯಾದ ಮೇಲೆ ತೆರೆ ಸರಿಯುತ್ತದೆ. ಅವನು ಸತ್ಯದ ಹೃದಯದಲ್ಲಿ ಸ್ಥಾಪಿತನಾಗುತ್ತಾನೆ. ಅಭಿನವಗುಪ್ತನ ಈ ಮಾತುಗಳಲ್ಲಿ ಅವನು ಹೀಗೆ ಉದ್ಗರಿಸುತ್ತಾನೆ:

ಸ್ವತಂತ್ರಃ ಸ್ವಚ್ಛಾತ್ಮಾ ಸ್ಫುರತಿ ಸತತಂ ಚೇತಸಿ ಶಿವಃ ।
ಪರಾಶಕ್ತಿಶ್ಚೇಯಂ ಕರಣಸರಣಿಪ್ರಾಂತಮುದಿನಾ ॥
ತದಾ ಭೋಗೈಕಾತ್ಮಾ ಸ್ಫುರತಿ ಚ ಸಮಸ್ತಂ ಜಗದಿದಂ ।
ನ ಜಾನೇ ಕುತ್ರಾಯಂ ಧ್ವನಿರನುಪತೇತ್ ಸಂಸ್ಮೃತಿರಿತಿ ॥

(—ಉದ್ಧೃತ : ಮಹಾರ್ಥಮಂಜರೀ, ಪು.೨೫)

'ಸ್ವತಂತ್ರವಾದ ಇಚ್ಛೆಯುಳ್ಳವನೂ ಚಿತ್‌ಸ್ವರೂಪಿಯೂ ಆದ ಶಿವನೇ ನನ್ನ ಹೃದಯದಲ್ಲಿ ಸದಾ ಬೆಳಗುತ್ತಿರುವವನು. ನನ್ನ ಇಂದ್ರಿಯಗಳ ಅಂಚಿನಲ್ಲಿ ಸದಾ ಕ್ರೀಡಿಸುತ್ತಿರುವವಳು ಪರಾಶಕ್ತಿಯೇ. ಶುದ್ಧ ಅಹಂ-ಪ್ರಜ್ಞೆಯಾಗಿ ಇಡೀ ಜಗತ್ತು ಪ್ರಕಾಶಿಸುತ್ತಿದೆ. "ಜಗತ್ತು" ಎಂಬುದು ಯಾವುದನ್ನು ನಿರ್ದೇಶಿಸುತ್ತದೆಯೋ ಅದು ನನಗೆ ತಿಳಿಯದು."

## ವೀರಶೈವಧರ್ಮ

ಇನ್ನು ಮೋಕ್ಷದ ವಿಷಯದಲ್ಲಿ ವೀರಶೈವಧರ್ಮ ಏನು ಹೇಳುತ್ತದೆ ಎಂಬುದನ್ನು ನೋಡೋಣ. ಹನ್ನೆರಡನೆಯ ಶತಮಾನದಲ್ಲಿ ಶ್ರೀಬಸವೇಶ್ವರರು ಈ ಧರ್ಮವನ್ನು ಸ್ಥಾಪಿಸಿದರು, ಇಲ್ಲವೆ ಈ ಧರ್ಮಕ್ಕೆ ಹೊಸ ಚೈತನ್ಯವನ್ನೂ ರೂಪುರೇಷೆಗಳನ್ನೂ ನೀಡಿದರು. ವಿಶಾಲವಾದ ತತ್ತ್ವಗಳ ತಳಹದಿಯ ಮೇಲೆ ಸ್ಥಾಪಿತವಾಗಿರುವ ಈ ಧರ್ಮದ ರೂವಾರಿ ಬಸವೇಶ್ವರರು ಮಹಾನ್ ಅನುಭಾವಿಗಳು ಮತ್ತು ಸಮಾಜ ಸುಧಾರಕರು. ವೀರಶೈವರನ್ನು ಲಿಂಗಾಯತರು ಎಂದೂ ಕರೆಯಲಾಗಿದೆ. ಎದೆಯ ಮೇಲೆ ಲಿಂಗವನ್ನು ಧರಿಸಿ ಶಿವನ ಸಾಮೀಪ್ಯವನ್ನು ಅನುಭವಿಸುವಂತಾಗಲಿ ಎಂದು ಇಷ್ಟಲಿಂಗ ಧಾರಣೆಯನ್ನು ವಿಧಿಸಲಾಯಿತು. ಶಿವನು ಶಕ್ತಿಯಿಂದ ವಿಶಿಷ್ಟನಾಗಿರುವುದರಿಂದ ಈ ಧರ್ಮವನ್ನು **ಶಕ್ತಿ ವಿಶಿಷ್ಟಾದ್ವೈತ** ಎಂದು ನಿರ್ದೇಶಿಸುತ್ತಾರೆ. ಈ ಧರ್ಮವು ತಮಿಳು ಶೈವಧರ್ಮದಿಂದಲೂ ಕಾಶ್ಮೀರದ ಪ್ರತ್ಯಭಿಜ್ಞಾ ಶೈವಧರ್ಮದಿಂದಲೂ ಅನೇಕ ಅಂಶಗಳನ್ನು ಸ್ವೀಕರಿಸಿದೆ. ಶೈವಧರ್ಮದ ಜ್ಞಾನದ ಸ್ಥಾನವನ್ನು ಈ ಧರ್ಮದಲ್ಲಿ ಭಕ್ತಿಯು ಆಕ್ರಮಿಸಿಕೊಂಡಿದೆ.

ಈ ಧರ್ಮವು ಜೀವವನ್ನು ಅಂಗ ಎಂದೂ ಶಿವನನ್ನು ಲಿಂಗ ಎಂದೂ ನಿರ್ದೇಶಿಸಿದೆ. ನಿರಾಕಾರನಾದ ಶಿವನು ಮಾಯಾಶಕ್ತಿಯನ್ನು ಪ್ರವೇಶಿಸಿ ಜೀವ ಎಂದು ಕರೆಸಿಕೊಳ್ಳುತ್ತಾನೆ. ಜೀವ ಮತ್ತು ಶಿವ ಇವರ ನಡುವಣ ತೋರಿಕೆಯ ವ್ಯತ್ಯಾಸವೆಂದರೆ ಶಿವನು ಸರ್ವಜ್ಞ. ಜೀವವಾದರೋ ಅಲ್ಪಜ್ಞ. ಜೀವವು ಮಲಪಾಶದಿಂದ ಬದ್ಧವಾಗಿ ತನ್ನ ಶಿವಸ್ವರೂಪವನ್ನು ಮರೆತು ಲೌಕಿಕ ಚಟುವಟಿಕೆಗಳಲ್ಲಿ ತೊಡಗುತ್ತದೆ. ದೀಕ್ಷೆಯ ಸಮಯದಲ್ಲಿ ಗುರುವು ಶಿಷ್ಯನಿಗೆ ಇಷ್ಟಲಿಂಗವನ್ನು ನೀಡುತ್ತಾನೆ. ಗುರುವು ನೀಡುವ ಇಷ್ಟಲಿಂಗದಲ್ಲಿ ಶಿವನು ಸುಪ್ತವಾಗಿ, ಆದರೆ ಜೀವಂತನಾಗಿ ಇದ್ದೇ ಇರುತ್ತಾನೆ. ಶಿಷ್ಯನು ನಿಷ್ಠಾವಂತ ಸಾಧಕನಾಗಿ ಇಷ್ಟಲಿಂಗವನ್ನು ಪೂಜಿಸಿ ಶಿವನೊಡನೆ ಐಕ್ಯವನ್ನು ಸಾಧಿಸಬೇಕು. ವೀರಶೈವಧರ್ಮದ ಅತ್ಯುನ್ನತ ಆಧ್ಯಾತ್ಮಿಕ ಆದರ್ಶ ಇದೇ. ಇದನ್ನು ಸಾಧಿಸುವುದು ಷಟ್ಸ್ಥಲ ಮಾರ್ಗದಿಂದ. ವೀರಶೈವ ಧರ್ಮದ ವಿನೂತನ ಕಾಣಿಕೆಯೆಂದರೆ **"ಷಟ್ಸ್ಥಲ ಸಿದ್ಧಾಂತ"**.

## ಷಟ್‌ಸ್ಥಲ ಸಿದ್ಧಾಂತ

ಸ್ಥಲ ಎಂಬುದು ಪರಮ ಸತ್ಯವನ್ನು ನಿರ್ದೇಶಿಸುತ್ತದೆ. ಪಾರಿಭಾಷಿಕವಾಗಿ ಆ ಪದಕ್ಕೆ ಅಂತಹ ಅರ್ಥ ಇದ್ದರೂ ಸಾಮಾನ್ಯ ಭಾಷೆಯಲ್ಲಿ ಸ್ಥಲ ಎಂದರೆ ಒಂದು ಹಂತ, ಒಂದು ನಿರ್ದಿಷ್ಟ ಮನಃಸ್ಥಿತಿ ಅಥವಾ ನಿಲುವು. ಅಂತಹ ಸ್ಥಲಗಳು ಆರು. ಆದ್ದರಿಂದಲೇ ಷಟ್ಸ್ಥಲಸಿದ್ಧಾಂತ ಎಂಬುದು ರೂಢಿಗೆ ಬಂದಿರುವುದು. ಈ ಪ್ರಕ್ರಿಯೆಯಲ್ಲಿ ಅತ್ಯಂತ ಮುಖ್ಯವೂ, ಹಾಗೆಯೇ ಶರಣರು ಅನುಭಾವ ಸ್ಥಿತಿಯಲ್ಲಿ ಕಂಡುಕೊಂಡದ್ದೂ ಆದ ಒಂದು ಅಂಶವಿದೆ. ಅದೇನೆಂದರೆ ಲಿಂಗ ಅಥವಾ ಶಿವನು ಅಂಗ ಅಥವಾ ಜೀವಸ್ಥಿತಿಗೆ ಇಳಿದಿದ್ದಾನಷ್ಟೆ. ಮತ್ತೆ ಜೀವವು ಲಿಂಗಸ್ಥಿತಿಗೆ ಏರಬೇಕು. ಹಾಗೆ ಏರುವಾಗ ಪ್ರತಿಯೊಂದು ಮೆಟ್ಟಲಿನಲ್ಲಿಯೂ ಶಿವನೂ ಆ ನೆಲೆಗೆ ಇಳಿದು ಜೀವವು ಹಂತಹಂತವಾಗಿ ಮೇಲೇರಲು ನೆರವಾಗುತ್ತಾನೆ. ಅಂತಿಮವಾಗಿ ಜೀವವು ಶಿವನಾಗುವವರೆಗೂ ಅವನು ಜೀವದ ಬೆಂಬಲಕ್ಕೆ ಇದ್ದೇ ತೀರುತ್ತಾನೆ.

ಜೀವವು ಶಿವಸ್ಥಿತಿಗೆ ಏರಲು ಪ್ರಯತ್ನಿಸುವ ಮೊದಲ ನೆಲೆ

ಅಥವಾ ಮೆಟ್ಟಿಲನ್ನು **ಭಕ್ತಸ್ಥಲ** ಎಂದು ಕರೆದಿದ್ದಾರೆ. ಈ ನೆಲೆಯಲ್ಲಿ ಭಕ್ತನು ಪೂಜಿಸುವ **ಇಷ್ಟಲಿಂಗವನ್ನು ಆಚಾರಲಿಂಗ** ಎಂದೂ ಅವನು ಆಚರಿಸುವ ಭಕ್ತಿಯನ್ನು **ಸದ್ಭಕ್ತಿ**ಯೆಂದೂ ಕರೆದಿದ್ದಾರೆ. ಇಂಥ ಭಕ್ತಿಯನ್ನು ಆಚರಿಸುವಾಗ ಭಕ್ತನು ಒಳ್ಳೆಯ ಕಾರ್ಯಗಳನ್ನೇ ಮಾಡುತ್ತಿರಬೇಕೆಂದೂ, ಅವನ್ನೆಲ್ಲ **ಸುಚಿತ್ತ** ಎಂಬ ಹಸ್ತದಿಂದ ಭಗವಂತನಿಗೆ ಅರ್ಪಿಸಬೇಕೆಂದೂ ವಿಧಿಸಲಾಗಿದೆ. ಹೀಗೆ ಆಚರಿಸುತ್ತಾ ಭಕ್ತನು ಮುಂದಿನ ಮೆಟ್ಟಿಲಾದ ಮಾಹೇಶ್ವರಸ್ಥಲವನ್ನು ಸೇರುತ್ತಾನೆ.

ಈ ಸ್ಥಲದಲ್ಲಿ ಲಿಂಗದ ಹೆಸರು **ಗುರುಲಿಂಗ**. ಇಲ್ಲಿ ಆಚರಿಸುವುದು ಸದ್ಭಕ್ತಿ. ಭಕ್ತಿಯನ್ನು ನಿವೇದಿಸುವುದು **ಸುಬುದ್ಧಿ** ಎಂಬ ಹಸ್ತದಿಂದ. ಮಾಹೇಶ್ವರ ಎಂದು ಏಕೆ ಕರೆಯುತ್ತಾರೆ ಎಂದರೆ ಇಷ್ಟಲಿಂಗದಲ್ಲಿ ಅಂತಹ ಅಚ್ಚಳಿಯದ, ಬೇರೆ ದೈವಗಳಿಗೆ ಮಣಿಯದ ಶ್ರದ್ಧೆ ಸಾಧಕನಲ್ಲಿರಬೇಕು ಎಂಬುದಕ್ಕಾಗಿ. ಶ್ರದ್ಧೆ ನೆಲೆಯೂರಿ ನಿಲ್ಲಲಿ ಎಂಬ ಕಾರಣಕ್ಕಾಗಿ ಹೀಗೆ ಏಕದೈವೋಪಾಸನೆಯನ್ನು ಕಟ್ಟುನಿಟ್ಟಾಗಿ ವಿಧಿಸಲಾಗಿದೆ. ಹೀಗೆ ಏಕಾಗ್ರತೆಯಿಂದ ಭಕ್ತಿಯನ್ನು ಬಲಿಸಿಕೊಂಡ ಸಾಧಕನು ತಲುಪುವ ಮೂರನೆಯ ಸ್ಥಲ ಪ್ರಸಾದಸ್ಥಲ.

ಇಲ್ಲಿ ಸಾಧಕನು ನಿರಹಂಕಾರವೆಂಬ ಹಸ್ತದಿಂದ **ಮಹಾಲಿಂಗ**ವನ್ನು ಪೂಜಿಸುತ್ತಾನೆ. ಅವನದು ಅವಧಾನ ಭಕ್ತಿ. ಇಲ್ಲಿ ಅವನಿಗೆ ಇಂದ್ರಿಯಗಳ ಮೂಲಕ ದೊರಕುವ ಅನುಭವಗಳೆಲ್ಲವನ್ನೂ ಸ್ವೀಕರಿಸುತ್ತಿರುವವನು ಸಾಕ್ಷಾತ್ ಭಗವಂತನೇ ಎಂಬ ಅನುಭವವಾಗುತ್ತದೆ. ಎಲ್ಲ ಅನುಭವಗಳನ್ನು ಭಕ್ತನು ಭಗವಂತನ ಪ್ರಸಾದ ಎಂಬುದಾಗಿ ಸ್ವೀಕರಿಸುತ್ತಾನೆ. ಈ ನಿಷ್ಠೆ ಬಲಿತರೆ ಅವನು ನಾಲ್ಕನೆಯದಾದ **ಪ್ರಾಣಲಿಂಗಿಸ್ಥಲ**ವನ್ನು ಸೇರುತ್ತಾನೆ.

**ಸುಮನೋಹಸ್ತ**ದಿಂದ ಇಷ್ಟಲಿಂಗಕ್ಕೆ ಅವನು ಸಮರ್ಪಿಸುವುದು **ಅನುಭಾವ ಭಕ್ತಿ**ಯನ್ನು. ಇಲ್ಲಿಯೂ ಮುಂದೆಯೂ ನಡೆಯುವ ಕ್ರಿಯೆಗಳೆಲ್ಲ ಅಂತರಂಗ ಜಗತ್ತಿಗೆ ಸೇರಿದವು. ಇಲ್ಲಿ ಎರಡು ವಿಧದ ಕ್ರಿಯೆಗಳು ನಡೆಯುತ್ತವೆ. ಒಂದು ಪ್ರಾಣವನ್ನು ಲಿಂಗದಲ್ಲಿ, ಎಂದರೆ **ಶಿವ**ನಲ್ಲಿ ಸ್ಥಾಪಿಸುವುದು ಮತ್ತು **ಶಿವ**ನನ್ನು ಪ್ರಾಣದಲ್ಲಿ ಸ್ಥಾಪಿಸುವುದು. ಈ ಪ್ರಕ್ರಿಯೆಯನ್ನು **ಶಿವಯೋಗ** ಎಂದು ಕರೆಯುತ್ತಾರೆ.ಇದು ರಾಜಯೋಗವೂ ಹೌದು. ಸ್ವಭಾವತಃ ಚಂಚಲವಾದ ಮನಸ್ಸನ್ನು ನಿಗ್ರಹಗೊಳಿಸುವ ಮತ್ತು ಅದನ್ನು ಧ್ಯಾನವಸ್ತುವಿನ ಮೇಲೆ ಏಕಾಗ್ರಗೊಳಿಸುವ ಯೋಗಕ್ರಿಯೆ ಇಲ್ಲಿ ನಡೆಯುತ್ತದೆ. ಹಾಗಾಗುವಾಗ **ಚಿತ್ತ** ಬುದ್ಧಿ ಎರಡೂ ಶುದ್ಧಗೊಳ್ಳುತ್ತವೆ, ಅಹಂಕಾರ ನಾಶವಾಗುತ್ತದೆ. ಮನಸ್ಸು ಲಿಂಗದಲ್ಲಿ ನೆಲೆಗೊಂಡು ಶಾಂತಿಯನ್ನು ಅನುಭವಿಸುತ್ತದೆ. ಭಕ್ತನ ಚಿತ್ತವು ಭಗವಂತನ ಬೆಳಕನ್ನು ಪ್ರತಿಫಲಿಸುತ್ತದೆ. ಕ್ರಮಕ್ರಮವಾಗಿ ಅವನು ತನ್ನ ನಿಜಸ್ವರೂಪವನ್ನು ಅರಿಯುತ್ತಾನೆ. ಇಲ್ಲಿಯೂ ಇತರ ಸ್ಥಲಗಳಂತೆ ಭಗವಂತನ ಸಹಾಯಹಸ್ತ ಸಾಧಕನಿಗೆ ಲಭ್ಯವಾಗಿಯೇ ಇದೆ ಎಂಬುದನ್ನು ನೆನಪಿನಲ್ಲಿಡಬೇಕು. ಈ ಸ್ಥಲದಲ್ಲಿ ನೆರವನ್ನು ನೀಡುವ ಭಗವಂತನನ್ನು **ಚರಲಿಂಗ** ಎಂದು ಕರೆಯಲಾಗುತ್ತದೆ. ಅಂದಿನ ಶಿವಶರಣರ ನಡುವೆ ಜ್ಞಾನಸೂರ್ಯನಂತೆ ಜ್ವಲಿಸುತ್ತಿದ್ದ ಅಲ್ಲಮಪ್ರಭು, ಈ ಸ್ಥಲದಲ್ಲಿ ಸಾಧಕನು ಅನುಭವಿಸುವ ಅದ್ವೈತಾನುಭೂತಿಯನ್ನು ತನ್ನ ಒಂದು ವಚನದಲ್ಲಿ ಹೀಗೆ ವರ್ಣಿಸಿದ್ದಾನೆ:

> **ಪ್ರಾಣಲಿಂಗಕ್ಕೆ ಕಾಯವೇ ಸಜ್ಜೆ,**
> **ಆಕಾಶಗಂಗೆಯಲ್ಲಿ ಮಜ್ಜನ,**
> **ಹೂವಿಲ್ಲದ ಪರಿಮಳದ ಪೂಜೆ,**
> **ಹೃದಯಕಮಲದಲ್ಲಿ ಶಿವಶಿವಾ ಎಂಬ ಶಬ್ದ.**
> **ಇದು ಅದ್ವೈತ ಕಾಣಾ ಗುಹೇಶ್ವರಾ.**

ಈ ಸ್ಥಿತಿಯಲ್ಲಿ ಭಕ್ತನು ಅರೆಕ್ಷಣವೂ ಭಗವಂತನನ್ನು ಅಗಲಿರಲಾರ. ಈ ಮನಸ್ಥಿತಿಯು ಅವನನ್ನು ಐದನೆಯದಾದ **ಶರಣಸ್ಥಲ**ಕ್ಕೆ ಕರೆದೊಯ್ಯುತ್ತದೆ.

ಇಲ್ಲಿನದು **ಆನಂದ ಭಕ್ತಿ**. ಅದು ಅರ್ಪಿತವಾಗುವುದು ಸುಜ್ಞಾನಹಸ್ತದಿಂದ. ಭಗವಂತ ಇಲ್ಲಿ ಭಕ್ತನಿಗೆ ನೆರವಾಗುವುದು **ಶಿವಲಿಂಗ** ಎಂಬ ಹೆಸರಿನಿಂದ. ಯಾವುದೇ ಧಾರ್ಮಿಕಕ್ರಿಯೆಗಳ ಆಚರಣೆಗೂ ಈ ಸ್ಥಲದಲ್ಲಿ ಅವಕಾಶವಿಲ್ಲ. ಸಾಧಕನು ಈಗ ಜ್ಞಾನಪೂರ್ಣನಾಗಿರುತ್ತಾನೆ. ಅವನ ಹೃದಯಕಮಲದಲ್ಲಿ ಪರಮಶಿವನು ವಿರಾಜಮಾನನಾಗಿರುತ್ತಾನೆ. ಈ ಅವಸ್ಥೆಯು ಸಾಧಕನನ್ನು ಕೊನೆಯದಾದ **ಐಕ್ಯಸ್ಥಲಕ್ಕೆ** ಒಯ್ಯುತ್ತದೆ.

ಇಲ್ಲಿ ಭಕ್ತನು ಸಾಧಿಸುವುದು **ಸಮರಸ ಭಕ್ತಿ**ಯನ್ನು, **ಸದ್ಭಾವಹಸ್ತ**ದ ನೆರವಿನಿಂದ. ಭಗವಂತನು ಈ ಸ್ಥಲದಲ್ಲಿ **ಆಚಾರಲಿಂಗ**ವೆಂಬ ಹೆಸರನ್ನು ಪಡೆದಿರುತ್ತಾನೆ. ಈ ಸ್ಥಿತಿಯಲ್ಲಿ ತಿಳಿಯುವವನು **(ಜ್ಞಾತೃ)**, ತಿಳಿಯಬೇಕಾದದ್ದು **(ಜ್ಞೇಯ)** ಮತ್ತು ತಿಳಿವು **(ಜ್ಞಾನ)** ಇವುಗಳ ನಡುವೆ ಯಾವ ಭೇದವೂ ಇರುವುದಿಲ್ಲ. ಹಾಲು ಹಾಲಿನೊಂದಿಗೆ ಬೆರೆಯುವಂತೆ ಜೀವವು ಶಿವನೊಡನೆ ಐಕ್ಯವಾಗುವ ಸ್ಥಿತಿ ಇದು. ವೀರಶೈವ ಧರ್ಮದ ಪ್ರಕಾರ ಇದೇ ಮೋಕ್ಷ. ಆದರೂ ಇದು ಅದ್ವೈತವಲ್ಲ.

ತತ್ತ್ವಪ್ರತಿಪಾದನೆಯ ದೃಷ್ಟಿಯಿಂದಲ್ಲದಿದ್ದರೂ, ಸಾಮಾಜಿಕವಾಗಿ ಅತ್ಯಂತ ಮುಖ್ಯವಾಗಿರುವುದರಿಂದ ಮತ್ತೊಂದು ಅಂಶವನ್ನು ಅಗತ್ಯವಾಗಿ ಹೇಳಬೇಕಾಗಿದೆ. ಹನ್ನೆರಡನೆಯ ಶತಮಾನದ ಶರಣರು **ಕಾಯಕ ತತ್ತ್ವ**ವನ್ನು ಎತ್ತಿಹಿಡಿದರು. ಕಾಯಕ ಎಂದರೆ ಶರೀರ ಶ್ರಮದಿಂದ ಮಾಡುವ ಉದ್ಯೋಗ. ಸಾಧಕನು ಷಟ್ಸ್ಥಲಗಳಲ್ಲಿ ಯಾವುದೇ ಹಂತದಲ್ಲಿರಲಿ, ಐಕ್ಯಸ್ಥಲದಲ್ಲಿದ್ದು ಆನಂದಾನುಭೂತಿಯನ್ನು ಪಡೆಯುತ್ತಿರಲಿ, ಅವನು ದೈಹಿಕ ಶ್ರಮದಿಂದ ತನ್ನ ಅನ್ನವನ್ನು ತಾನು ಸಂಪಾದಿಸಲೇಬೇಕು ಎಂಬುದೇ ಕಾಯಕ ತತ್ತ್ವ. ಅದು ವೀರಶೈವಧರ್ಮದ ಅನಿವಾರ್ಯ ಭಾಗವಾಗಿ ಹೋಗಿದೆ ಎನ್ನುವ ದೃಷ್ಟಿಯಿಂದ ಇದನ್ನು ಉಲ್ಲೇಖಿಸಲಾಗಿದೆ.